ಬಲಪಡಿಸಬೇಕು. ಲಸಿಕೆಗಳನ್ನು ಅಲ್ಲೇ ಸಿದ್ದಪಡಿಸಬೇಕು, ಆಗಸ್ಟ್ ಸೆಪ್ಟೆಂಬರ್ ತಿಂಗಳಲ್ಲಿ ಆ ಲಸಿಕೆಗಳನ್ನು ಕೊಡಿಸಬೇಕು.

ಅಧ್ಯಕ್ಷರು:– ಮಾಡಿ, ಆಯಿತು ತೆಗೆದುಕೊಳ್ಳಿ, ನಿಮ್ಮ ಶಿವಮೊಗ್ಗದಲ್ಲೆ ಇದೆಯಲ್ಲಾ, ಅಲ್ಲೇ ತಯಾರು ಮಾಡಿ. ಮೊದಲು ಮಂಗನ ಕಾಯಿಲೆ ಬಂದಾಗ ಎಷ್ಟು ಕಷ್ಟಪಟ್ಟಿದ್ದೇವೆ ನಿಮಗೆ ಗೊತ್ತಾ? ಇದು ನಮ್ಮಲ್ಲೇ ಹಿಟ್ಟಿದ್ದು, ಕ್ಯಾಸನೂರು ಫಾರೆಸ್ಟ್‌ನಲ್ಲಿ ಹುಟ್ಟಿದ್ದು.

ಶ್ರೀ ಯು.ಟಿ. ಖಾದರ್:– ಶಾಸಕರ ಎಲ್ಲಾ ಸಲಹೆ–ಸೂಚನೆಗಳನ್ನು ಪಡೆದುಕೊಂಡು ಚರ್ಚೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಟ್ಟಡ

52(323); ಶ್ರೀ ಯಾವಗಲ್ ಬಿ.ಆರ್. (ನರಗುಂದ)

ಅ) ಗದಗ ಜಿಲ್ಲೆ ನರಗುಂದ ತಾಲ್ಲೂಕಿನ ಚಿಕ್ಕನರಗುಂದ ಮತ್ತು ರೋಣ ತಾಲ್ಲೂಕಿನ ಹೊಳೆ ಆಲೂರು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ನೂತನ ಕಟ್ಟಡಗಳನ್ನು ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ, ಈ ಕಟ್ಟಡಗಳ ಕಾಮಗಾರಿಗಳನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕಲ್ಯಾಣ ಸಚಿವರು)

ಅ) ಗದಗ ಜಿಲ್ಲೆ ನರಗುಂದ ತಾಲ್ಲೂಕಿನ ಚಿಕ್ಕನರಗುಂದ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡ ಕಾಮಗಾರಿಯನ್ನು ಇಲಾಖೆಯಲ್ಲಿ ಲಭ್ಯವಾಗುವ ಅನುದಾನಕ್ಕೆ ಅನುಗುಣವಾಗಿ ಮುಂಬರುವ ವರ್ಷಗಳಲ್ಲಿ ನಿರ್ಮಾಣ ಮಾಡಲಾಗುವುದು.

ಆ) ಗದಗ ಜಿಲ್ಲೆ ರೋಣ ತಾಲ್ಲೂಕಿನ ಹೊಳೆ ಆಲೂರು ಪ್ರಾಥಮಿಕ ಆರೋಗ್ಯ ಕೇಂದ್ರದ ನೂತನ ಕಟ್ಟಡವನ್ನು ಆರ್.ಐ.ಡಿ.ಎಫ್–14ರ

ಯೋಜನೆಯಡಿ 2013ರಲ್ಲಿ ಜಿಲ್ಲಾ ಪಂಚಾಯತ್‌ವತಿಯಿಂದ ನಿರ್ಮಿಸಲಾಗಿದೆ. ಸದರಿ ಆಸ್ಪತ್ರೆಯು ನೂತನ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ.

ಶ್ರೀ ಬಿ.ಆರ್. ಯಾವಗಲ್:– ಮಾನ್ಯ ಅಧ್ಯಕ್ಷರೆ, ಇಲ್ಲಿ ಬಹಳ ಹಳೆಯ ಆರೋಗ್ಯ ಕೇಂದ್ರವಿತ್ತು, ಇದೊಂದು ಹೋಬಳಿ ಹೆಡ್‌ಕ್ವಾರ್ಟರ್ ಇದೆ. ಎರಡನೆಯದಾಗಿ ಹೊಳೆಹಾಲೂರಿನಲ್ಲಿ RRDF ಯೋಜನೆಯಲ್ಲಿ ಮಾಡಿದಾಗ್ಯೂ ಸಹ ಬಹಳ ಕಳಪೆ ಕೆಲಸವಾಗಿರುವ ಕಾರಣದಿಂದ ಹಾಳಾಗಿ ಹೋಗಿದೆ, ಈ ಕೆಲಸಗಳನ್ನು ಯಾವಾಗ ತೆಗೆದುಕೊಳ್ಳುತ್ತೀರಿ ಮತ್ತು ನರಗುಂದ, ಶಿರೋಳ್ ಇರಬಹುದು ಕಟ್ಟುತ್ತಿರುವ ಕಟ್ಟಡಗಳು ಹಣವಿಲ್ಲದೆ ಹಾಗೆ ನಿಂತಿವೆ, ಅದಕ್ಕೆ ಏನಾದರೂ ಮಾಡುತ್ತೀರಾ? ಯಾವಾಗ ಪ್ರಾರಂಭ ಮಾಡುತ್ತೀರಿ ಹೇಳಿ.

ಶ್ರೀ ಯು.ಟಿ. ಖಾದರ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಎರಡು ಪ್ರಶ್ನೆಗಳನ್ನು ಕೇಳಿದ್ದಾರೆ, ಮೊದಲನೆ ಪ್ರಶ್ನೆಗೆ ಸಂಬಂಧಿಸಿದಂತೆ, ಇದನ್ನು ಬಹಳ ಹಿಂದೆಯೇ ಚಿಕ್ಕನರಗುಂದದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಒಂದು ಯುನಿಟ್ ಆಗಿತ್ತು.

ಅಧ್ಯಕ್ಷರು:– ಯಾವಾಗ ಮಾಡಿಕೊಡುತ್ತೀರೆಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ.

ಶ್ರೀ ಯು.ಟಿ. ಖಾದರ್:– ಮುಂದಿನ ದಿವಸಗಳಲ್ಲಿ ಅನುದಾನಕ್ಕನುಗುಣವಾಗಿ ನಾವು ಪ್ರಾರಂಭ ಮಾಡಿ ಕೊಡುತ್ತೇವೆ.

ಅಧ್ಯಕ್ಷರು:– ಅನುದಾನವಿಲ್ಲದಿದ್ದರೆ, ಸಪ್ಲಿಮೆಂಟರಿ ಬಜೆಟ್‌ನಲ್ಲಿ ತೆಗೆದುಕೊಂಡು ಬೇಗ ಮಾಡಿಕೊಡಿ.

ಶ್ರೀ ಯು.ಟಿ. ಖಾದರ್:– ಮಾಡುತ್ತೇವೆ.

ಶ್ರೀ ಬಿ.ಆರ್. ಯಾವಗಲ್:– ಹಳೆಯದು ಆಗಿಲ್ಲ, ದಯವಿಟ್ಟು ಎರಡು ಮಾಡಿಕೊಡಿ.